ಸುಕನ್ಯ

**ಪಿ.ಡಬ್ಲ್ಯೂ-1**

**ದಿನಾಂಕ 09.05.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರಿದ ಪಾಟಿ ಸವಾಲು ಆರೋಪಿ ಪರ ಶ್ರೀ. ಬಿ ಬಿ **ವಕೀಲರವರಿಂದ:**

ಆರೋಪಿಯ ತಮ್ಮನ ಹೆಸರು ಚಂದ್ರು ಎಂದರೆ ಸರಿ. ಅವರು ನನಗೆ ಪರಿಚಯವಿರುತ್ತಾರೆ. ನಾನು ಚಂದ್ರುರವರೊಂದಿಗೆ ಹಣದ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಫೋನಿನಲ್ಲಿ ಮಾತನಾಡಿರುತ್ತೇನೆ ಎಂದರೆ ಸರಿ, ಸಾಕ್ಷಿ ಮುಂದುವರಿದು ಆರೋಪಿಯ ತಮ್ಮ ಚಂದ್ರು ಸಹಾ ನನ್ನಿಂದ ಸಾಲವನ್ನು ಪಡೆದಿರುತ್ತಾರೆ. ಚಂದ್ರುರವರಿಗೆ ರೂ 10,000/- ಗಳನ್ನು ಕೊಟ್ಟಿರುತ್ತೇನೆ.

2. ಆರೋಪಿ ನನ್ನ ಬಳಿ ಯಾವುದೇ ಚೀಟಿಯನ್ನು ಹಾಕಿರುವುದಿಲ್ಲ. ಆರೋಪಿ ಮೇಟಗಳ್ಳಿ ಮೈಸೂರಿನಲ್ಲಿ ವಾಸವಾಗಿದ್ದಾರೆ. ಅವರ ಮನೆ ನಂಬರ ನನಗೆ ಗೊತ್ತಿಲ್ಲ. ಆರೋಪಿ ವಾಸವಾಗಿರುವುದು ಮನೆ ನಂಬರ 239, 7 ನೇ ಅಡ್ಡರಸ್ತೆ, ಬಿ ಎಂ ಸಿ ನಗರ ಮೈಸೂರು ಎಂದರೆ ನನಗೆ ಗೊತ್ತಿಲ್ಲ. ನಾನು ಹಣವನ್ನು ಆರೋಪಿಗೆ ಕೊಡುವಾಗ ಅವರು 15 ನೇ ಅಡ್ಡರಸ್ತೆ ಬಿ ಎಂ ಸಿ ನಗರದಲ್ಲಿ ವಾಸವಾಗಿದ್ದರು. ನಾನು ಹಣವನ್ನು ಆರೋಪಿಗೆ ಕೊಡುವಾಗ ನಮ್ಮ ಮನೆಯ ಮುಂಭಾಗ ಆರೋಪಿ ವಾಸವಾಗಿದ್ದರು. ನಮ್ಮ ಮನೆಗೆ ನಂಬರನ್ನು ಕೊಟ್ಟಿರುವುದಿಲ್ಲ. 15 ನೇ ಅಡ್ಡರಸ್ತೆ ಬಿ ಎಂ ಸಿ ನಗರದಲ್ಲಿ ನಮ್ಮ ಸ್ವಂತ ಮನೆ ಇರುವುದಿಲ್ಲ ಎಂದರೆ ಸರಿಯಲ್ಲ.

3. ನಾನು ಆರೋಪಿಗೆ ಆಗಸ್ಟ 3 ನೇ ವಾರ 2021 ರಂದು ಹಣವನ್ನು ನೀಡಿರುತ್ತೇನೆ, ನನಗೆ ನಿರ್ದಿಷ್ಟ ದಿನಾಂಕ ಗೊತ್ತಿಲ್ಲ, ಈ ಹಣದ ವ್ಯವಹಾರದ ಪೂರ್ವದಲ್ಲಿ ಆರೋಪಿ ನನ್ನೊಂದಿಗೆ ಯಾವುದೇ ಹಣದ ವ್ಯವಹಾರ ಮಾಡಿರುವುದಿಲ್ಲ.

ಆರೋಪಿಗೆ ಹಣವನ್ನು ಚೆಕ್ಕಿನ ಮೂಲಕ ಕೊಡಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ನನ್ನ ಬಳಿ ಹಣ ಇತ್ತು, ಆದ್ದರಿಂದ ನಾನು ಹಣವನ್ನು ಆರೋಪಿಗೆ ಕೊಟ್ಟಿರುತ್ತೇನೆ. ನಾನು ಸುಮಾರು 10 ವರ್ಷಗಳಿಂದ ಬ್ಯಾಂಕುಗಳ ಖಾತೆ ಹೊಂದಿ ವ್ಯವಹಾರ ಮಾಡುತ್ತೇನೆ. ಕೆಲವೊಂದು ಬಾರಿ ನನಗೆ ಅವಶ್ಯಕತೆ ಇದ್ದಾಗ ಹಣವನ್ನು ಬ್ಯಾಂಕಿನಿಂದ ತೆಗೆಯುತ್ತೇನೆ.

4. ನಾನು ಚಲುವೇಗೌಡ ಎಂಬುವವರೊಂದಿಗೆ ಕರಾರು ಪತ್ರ ಮಾಡಿಕೊಳ್ಳುವಾಗಲೂ ಸಹಾ ನನ್ನ ಬಳಿ ಹಣ ಇತ್ತು. ನನ್ನ ಬಳಿ ಇರುವ ನಗದು ಹಣವನ್ನು ಬ್ಯಾಂಕಿಗೆ ಹಾಕಿ ಬ್ಯಾಂಕಿನ ಮೂಲಕ ಆರೋಪಿಯ ಖಾತೆಗೆ ಹಾಕಲು ನನಗೆ ತೊಂದರೆ ಇರಲಿಲ್ಲ.

5. ನನಗೆ ಇಬ್ಬರು ಮಕ್ಕಳು, ಇಬ್ಬರೂ ಸಹಾ ವೈದ್ಯರಾಗಿದ್ದು, ಈಗ ವೈದ್ಯಕೀಯ ವೃತ್ತಿಯನ್ನು ಮಾಡುತ್ತಿದ್ದಾರೆ, ನನ್ನ ಮಕ್ಕಳ ವ್ಯವಹಾರವೇ ಬೇರೆ , ನನ್ನ ವ್ಯವಹಾರವೇ ಬೇರೆ ಎಂದರೆ ಸರಿಯಲ್ಲ, ಒಬ್ಬ ಮಗ ಮಂಡ್ಯದಲ್ಲಿ ಮತ್ತೊಬ್ಬ ಶಿವಮೊಗ್ಗದಲ್ಲಿ ವೈದ್ಯರಾಗಿ ಕೆಲಸ ಮಾಡುತ್ತಿದ್ದಾರೆ. ಇಬ್ಬರು ಮಕ್ಕಳು ಸಹಾ ಖಾಸಗಿ ಆಸ್ಪತ್ರೆಯಲ್ಲಿ ವೈದ್ಯರಾಗಿ ಕೆಲಸ ಮಾಡುತ್ತಾರೆ.

6. ಆರೋಪಿಗೆ ಹಣವನ್ನು ನೀಡಿದಾಗ ನನಗೆ ಚೆಕ್ಕನ್ನು ಕೊಟ್ಟಿರುವುದಿಲ್ಲ. ನಾನು ಆರೋಪಿಗೆ ಹಣವನ್ನು ನೀಡುವಾಗ ಯಾವುದೇ ದಾಖಲೆಗಳನ್ನು ಬರೆಸಿಕೊಂಡಿರುವುದಿಲ್ಲ, ಕಾರಣ ಅವರು 2 ತಿಂಗಳಲ್ಲಿ ವಾಪಸು ಕೊಡುವುದಾಗಿ ತಿಳಿಸಿರುತ್ತಾರೆ. ನಾನು ಆರೋಪಿಗೆ ಮನೆಯಲ್ಲಿ ಹಣವನ್ನು ನೀಡುವಾಗ ನನ್ನ ಮಗಳು ಇದ್ದಳು. ಆರೋಪಿ ನನ್ನ ಬಳಿ ಹಣ ಕೇಳಿದ 1 ವಾರದ ನಂತರ ನಾನು ಹಣ ಕೊಟ್ಟಿರುತ್ತೇನೆ. ನಾನು ಆರೋಪಿಗೆ ಯಾವ ದಿನದಂದು ಹಣವನ್ನು ಕೊಟ್ಟಿರುತ್ತೇನೆ ಎಂದು ನನಗೆ ಈಗ ನೆನಪಿಲ್ಲ. ನಾನು ಆರೋಪಿಗೆ ಹಣವನ್ನು ನೀಡಿದ ನಂತರ 1 ವಾರದ ನಂತರ ಆರೋಪಿ ಚೆಕ್ಕನ್ನು ಕೊಟ್ಟಿರುತ್ತಾರಾ ಎಂಬ ಸೂಚನೆಗೆ ಸಾಕ್ಷಿಯು ನಾನು ಹಣವನ್ನು ಮರುಪಾವತಿ ಮಾಡಬೇಕೆಂದು ಆರೋಪಿಯ ಬಳಿ ಕೇಳಿದಾಗ ಆರೋಪಿ ಚೆಕ್ಕು ಕೊಟ್ಟಿರುತ್ತಾರೆ.

7. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನಾನು ಹೇಳಿ ಬರೆಸಿರುತ್ತೇನೆ. ನಾನು 3 ನೇ ವಾರ ಆಗಸ್ಟ 21ರಂದು ಆರೋಪಿಗೆ ಹಣ ನೀಡಿದಾಗ 3 ತಿಂಗಳ ಒಳಗಾಗಿ ಹಣವನ್ನು ವಾಪಸು ಕೊಡುವುದಾಗಿ ಆರೋಪಿ ತಿಳಿಸಿರುತ್ತಾರೆ.

ನಾನು ಎಸ್ ಎಸ್ ಎಲ್ ಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನೇ ಬ್ಯಾಂಕಿನ ಚಲನಗಳನ್ನು ತುಂಬಿ ಹಣವನ್ನು ಹಾಕುವುದು ತೆಗೆಯುವುದು ಮಾಡುತ್ತೇನೆ. ನನಗೆ ಇಂಗ್ಲೀಷ ಬರೆಯಲು ಬರುವುದಿಲ್ಲ. ಚೀಟಿ ವ್ಯವಹಾರಕ್ಕಾಗಿ ಆರೋಪಿಯು 4 ಖಾಲಿ ಚೆಕ್ಕುಗಳನ್ನು ನನಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಈ ಪ್ರಕರಣದ ದಾಖಲಿಸಿದ ನಂತರ ಆರೋಪಿಗೆ ಫೋನ್ ಮಾಡಿ ಹಣ ಕೊಡಬೇಕು ಎಂದು ಕೇಳಿರುತ್ತೇನೆ ಎಂದರೆ ಸರಿ. ಆರೋಪಿಗೆ ಫೋನ್ ಮಾಡಿ ಚೀಟಿ ಹಣವನ್ನು ಕೇಳಿರುತ್ತೇನೆ ಎಂದರೆ ಸರಿಯಲ್ಲ.

8. ಆರೋಪಿ ಮದುವೆಗೆ ಮಾಡಿರುವ ಸಾಲ ತೀರಿಸಲು ನನ್ನ ಬಳಿ ಸಾಲವನ್ನು ಕೇಳಿರುತ್ತಾರೆ. ಆರೋಪಿಗೆ ಯಾವಾಗ, ಎಲ್ಲಿ ಮದುವೆಯಾಯಿತು ಎಂದು ನನಗೆ ಗೊತ್ತಿಲ್ಲ. ಆರೋಪಿ ಮದುವೆಗೆ ಹಣ ಪಡೆದರು ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ಚೆಕ್ಕಿನಲ್ಲಿರುವ ಸಹಿ ಮಾತ್ರ ಆರೋಪಿಯದಾಗಿದ್ದು, ಉಳಿದ ಎಲ್ಲಾ ಒಕ್ಕಣಿಕೆಗಳನ್ನು ನನ್ನ ಅಳಿಯ ವೆಂಕಟೇಶ ಬರೆದಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಆರೋಪಿ ಬರೆದಿರುತ್ತಾರೆ ಎಂದು ನುಡಿದರು. ಆರೋಪಿ ಚೆಕ್ಕನ್ನು ಮನೆಯಲ್ಲಿ ಬರೆದುಕೊಂಡು ಬಂದಿರುತ್ತಾರೆ. ನಾನು ಆರೋಪಿಯ ಬಳಿ ಚೆಕ್ಕನ್ನು ನನ್ನ ಮುಂದೆ ಬರೆಯಿರಿ ಎಂದು ಕೇಳಿರುವುದಿಲ್ಲ. ನಿಪಿ-1 ರಲ್ಲಿರುವ ಸಹಿ ಬೇರೊಂದು ಪೆನ್ನಿನಲ್ಲಿ ಬರೆದಿದ್ದು, ಚೆಕ್ಕಿನ ಒಕ್ಕಣಿಕೆಗಳನ್ನು ಬೇರೊಂದು ಪೆನ್ನಿನಲ್ಲಿ ಬರೆದಿರುತ್ತಾರೆ ಎಂದರೆ ಸರಿ.

9. ನೋಟಿಸಿನಲ್ಲಿರುವ ವಿಳಾಸವು ನನಗೆ ಈ ಪ್ರಕರಣ ದಾಖಲಿಸುವಾಗ ಗೊತ್ತಿತ್ತು ಎಂದರೆ ಸರಿ. ಸದರಿ ನೋಟಿಸಿನಲ್ಲಿರುವ ವಿಳಾಸವೇ ನಮ್ಮ ಮನೆ ಬಳಿ ಇರುವ ವಿಳಾಸ ಎಂದರೆ ಸರಿ. ನೋಟಿಸಿನಲ್ಲಿರುವ ವಿಳಾಸದಲ್ಲಿ ಆರೋಪಿ ವಾಸವಾಗಿರುವುದಿಲ್ಲ ಎಂದರೆ ಸರಿಯಲ್ಲ. ರೂ 20,000/- ಗಿಂತ ಹೆಚ್ಚಿನ ಹಣದ ವ್ಯವಹಾರ ಮಾಡಬೇಕಾದರೆ ಚೆಕ್ಕಿನ ಮೂಲಕವೇ ಮಾಡಬೇಕು ಎಂದರೆ ನನಗೆ ಗೊತ್ತಿಲ್ಲ. ರೂ 6 ಲಕ್ಷ ಹೆಚ್ಚಿನ ಮೊತ್ತವನ್ನು ಬ್ಯಾಂಕಿನ ಮೂಲಕ ವ್ಯವಹಾರ ಮಾಡಬೇಕು ಎಂದು ನಾನು ಕೇಳಿ ತಿಳಿದುಕೊಂಡಿರುವುದಿಲ್ಲ. ನಾನು ಯಾವುದೇ ರೀತಿಯ ಆದಾಯ ತೆರಿಗೆಯನ್ನು ಪಾವತಿ ಮಾಡುವುದಿಲ್ಲ. ಈ ರೂ 6 ಲಕ್ಷ ಗಳಿಗೆ ತೆರಿಗೆ ಕೋಡಬೇಕು ಎಂದು ನಾನು ಯಾವುದೇ ರೀತಿಯ ಆದಾಯ ತೆರಿಗೆಯನ್ನು ಪಾವತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಚೀಟಿ ವ್ಯವಹಾರಕ್ಕಾಗಿ ನೀಡಿರುವ ಚೆಕ್ಕುಗಳನ್ನು ದುರುಪಯೋಪಡಿಸಿಕೊಂಡು ಈ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

10. ಆರೋಪಿ ತಮ್ಮನಾದ ಚಂದ್ರುರವರಿಗೂ ಸಹಾ ಪೋನ್ ಮಾಡಿ ಚೀಟಿ ವ್ಯವಹಾರ ಕೊಡಬೇಕು ಎಂದು ಕೇಳಿರುತ್ತೇನೆ ಎಂದರೆ ಸಾಕ್ಷಿ ಈ ಹಣವನ್ನು ಕೇಳಿರುತ್ತೇನೆ ಎಂದು ನುಡಿದರು. ಈ ಪ್ರಕರಣ ದಾಖಲಿಸಿದ ನಂತರವೂ ಸಹಾ ಬೇರೊಬ್ಬರ ಪೋನಿನ ಮೂಲಕ ಪೋನ್ ಮಾಡಿ ಆರೋಪಿಗೆ ಹಣ ಕೇಳಿರುತ್ತೇನೆ ಎಂದರೆ ಸರಿಯಲ್ಲ, ನನ್ನ ಮೊಬೈಲ್ ನಂಬರ 9164339011 ಆಗಿರುತ್ತದೆ. ಸದರಿ ಮೊಬೈಲ್‌ನ್ನು ನಾನು ಸುಮಾರು 10 ವರ್ಷಗಳಿಂದ ಉಪಯೋಗಿಸುತ್ತಿದ್ದೇನೆ.

ಪಿರ್ಯಾದುದಾರ ಮುಂದುವರಿದ ವಿಚಾರಣೆಗೆ ಸಮಯಾವಕಾಶ ನೀಡಲಾಗಿದೆ.

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.**

**ಸಾ.ಓ.ಹೇ.ಸ.ಇದೆ.**

2 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ
ಪಾಂಡವಪುರ